



“ಓ ಚೈತನ್ಯ ಪುತ್ರನೇ! ಇದು ನನ್ನ ಪ್ರಥಮ ಉಪದೇಶ: ಪರಿಶುದ್ಧ ದಯಾಪೂರ್ಣ ಹಾಗೂ ಉಜ್ವಲವಾದ ಹೃದಯವನ್ನು ಹೊಂದು . . .”




**“ನ್ಯಾಯದ ಹಾದಿಯಲ್ಲಿ ನಡೆಯಿರಿ, ಏಕೆಂದರೆ ಇದು ನೇರ ಮಾರ್ಗವಾಗಿದೆ.”**



**“ಓ ಸ್ನೇಹಿತನೇ! ನಿನ್ನ ಹೃದಯದ ತೋಟದಲ್ಲಿ ಪ್ರೀತಿಯ ಗುಲಾಬಿಯ ಹೊರತು ಬೇರೇನೂ ನೆಡಬೇಡ. . .”**



"ಎಲ್ಲಾ ಮಾನವ ಗುಣಗಳ ಅಡಿಪಾಯವೇ ಸತ್ಯಸಂಧತೆ."



**“ಕೊಡುವುದು ಮತ್ತು ಉದಾರವಾಗಿರುವುದು ನನ್ನ ಗುಣಗಳು; ನನ್ನ ಸದ್ಗುಣಗಳಿಂದ ತನ್ನನ್ನು ತಾನು ಅಲಂಕರಿಸಿಕೊಳ್ಳುವವನಿಗೆ ಒಳಿತಾಗುವುದು”.**



“ತನಗಿಂತ ಹೆಚ್ಚಾಗಿ ತನ್ನ ಸಹೋದರನಿಗೆ ಆದ್ಯತೆ ನೀಡುವವನು ಧನ್ಯನು.”



“ಓ ಮನುಷ್ಯ ಪುತ್ರನೇ! ನೀನು ನನ್ನನ್ನು ಭೇಟಿಯಾಗಲು ಮತ್ತು ನನ್ನ ಸೌಂದರ್ಯವನ್ನು ಪ್ರತಿಬಿಂಬಿಸಲು ಅರ್ಹನಾಗಿರುವುದಕ್ಕಾಗಿ  ನಿನ್ನ ಹೃದಯವು ಸಂತೋಷದಿಂದ ಹಿಗ್ಗಲಿ.”



**“ನಾವು ಎಲ್ಲಾ ಸಮಯದಲ್ಲೂ ನಮ್ಮ ಸತ್ಯತೆ ಮತ್ತು ಪ್ರಾಮಾಣಿಕತೆಯನ್ನು ತೋರಿಸಬೇಕು . . ."**



"ಓ ಮಾನವ ತನುಜನೇ! ನನ್ನ ಮುಂದೆ ನೀನು ವಿನಮ್ರನಾಗು, ಆಗ ನಾನು ಕರುಣೆಯಿಂದ ನಿನ್ನನ್ನು ಭೇಟಿ ಮಾಡುವೆನು."



**“ನೀವು ಸಂತೋಷವಾಗಿರಿ. ನೀವು ಕೃತಜ್ಞರಾಗಿರಿ. ದೇವರಿಗೆ ಕೃತಜ್ಞತೆ ಸಲ್ಲಿಸಲು ಎದ್ದೇಳು,
ನಿಮ್ಮ ಕೃತಜ್ಞತೆಯು ಔದಾರ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ”.**



**“. . . ನಿಮ್ಮ ಅಲಂಕರಣವು ಕ್ಷಮೆ ಮತ್ತು ಕರುಣೆ ಮತ್ತು ದೇವರ ನೆಚ್ಚಿನ ಹೃದಯಗಳನ್ನು ಸಂತೋಷಪಡಿಸುವಂತದ್ದಾಗಿರಲಿ.”**



“ಓ ಜನರೇ, ನಿಮ್ಮ ನಾಲಿಗೆಯನ್ನು ಸತ್ಯತೆಯಿಂದ ಅಲಂಕರಿಸಿ ಮತ್ತು ನಿಮ್ಮ ಆತ್ಮಗಳನ್ನು ಪ್ರಾಮಾಣಿಕತೆಯ ಆಭರಣದಿಂದ ಅಲಂಕರಿಸಿ.”



“ದೇವರ ರಾಜ್ಯವು ಸಮಾನತೆ ಮತ್ತು ನ್ಯಾಯದ ಮೇಲೆ ಸ್ಥಾಪಿತವಾಗಿದೆ ಮತ್ತು ಪ್ರತಿ ಜೀವಂತ ಆತ್ಮಕ್ಕೆ(ತೋರುವ) ಕರುಣೆ, ಸಹಾನುಭೂತಿ ಮತ್ತು ದಯೆಯ ಮೇಲೆ ಸ್ಥಾಪಿಸಲಾಗಿದೆ”




**“ನಿಮ್ಮ ನಿಜವಾದ ಅಲಂಕರಣವು ದೇವರ ಪ್ರೀತಿಯಲ್ಲಿ ಮತ್ತು ಅವನನ್ನು ಹೊರತುಪಡಿಸಿ ಎಲ್ಲರಿಂದ ನಿಮ್ಮ ಬೇರ್ಪಡುವಿಕೆಯಲ್ಲಿದೆ ಎಂದು ತಿಳಿಯಿರಿ. . .”**




**“The source of all glory is acceptance of whatsoever the Lord hath bestowed, and contentment with that which God hath ordained.”**



“ಎಲ್ಲ ಮನುಷ್ಯರೊಂದಿಗೆ ಅತ್ಯಂತ ದಯೆ ಮತ್ತು ಪ್ರೀತಿಯ ಮನೋಭಾವದಿಂದ ಬೆರೆಯುವವನು ಧನ್ಯನು.”



**“ಧೈರ್ಯ ಮತ್ತು ಶಕ್ತಿಯ ಮೂಲ ದೇವರ ವಾಕ್ಯದ  ಪ್ರಚಾರ, ಮತ್ತು ಆತನ ಪ್ರೀತಿಯಲ್ಲಿ ಸ್ಥಿರತೆಯಲ್ಲಿರುವುದು.”**




“ದೇವರ ಮೇಲಿನ ನಂಬಿಕೆಯನ್ನು ಎಂದಿಗೂ ಕಳೆದುಕೊಳ್ಳಬೇಡಿ. ನೀವು ಯಾವಾಗಲೂ ಭರವಸೆಯಿಂದಿರಿ, ಏಕೆಂದರೆ ದೇವರ ಅನುಗ್ರಹಗಳು ಎಂದಿಗೂ ಮನುಷ್ಯನ ಮೇಲೆ ಹರಿಯುವುದನ್ನು ನಿಲ್ಲಿಸುವುದಿಲ್ಲ.”



“ವಿಶ್ವಾಸಾರ್ಹತೆಯು ಜನರ ಶಾಂತಿ ಮತ್ತು ಭದ್ರತೆಗೆ ಕಾರಣವಾಗುವ ದೊಡ್ಡ ದ್ವಾರವಾಗಿದೆ."




**“ಓ ಜನರೇ, ದೇವರ ಪ್ರೀತಿಯ ಶಾಖದಿಂದ ನೀವು ಇತರರ ಹೃದಯಗಳನ್ನು ಹೊತ್ತಿ ಉರಿಯುವಂತೆ ಮಾಡಿರಿ.”**




“ಓ ಅಸ್ತಿತ್ವದ ಪುತ್ರನೇ! ನೀನು ನನ್ನ ದೀಪ ಮತ್ತು ನನ್ನ ಬೆಳಕು ನಿನ್ನಲ್ಲಿದೆ. ನಿನ್ನ ತೇಜಸ್ಸನ್ನು ಅದರಿಂದ ಪಡೆದುಕೋ ಮತ್ತು ನನ್ನನ್ನು ಬಿಟ್ಟು ಯಾರನ್ನೂ ಹುಡುಕಬೇಡ.”



“ಉನ್ನತ ಪ್ರಯತ್ನದ ವಸ್ತ್ರವನ್ನು ಧರಿಸಿರುವ ಮತ್ತು ಈ ಧರ್ಮಕ್ಕಾಗಿ ಸೇವೆ ಸಲ್ಲಿಸಲು ಉದ್ಭವಿಸಿದ ನಿಷ್ಠಾವಂತನು ಸಂತೋಷವಾಗಿರುತ್ತಾನೆ.”



**‘‘“ಅವನು, ತಾಳ್ಮೆಯಿಂದ ಸಹಿಸಿಕೊಳ್ಳುವವರಿಗೆ ಪ್ರತಿಫಲವನ್ನು ಖಂಡಿತವಾಗಿ ಹೆಚ್ಚಿಸುವನು”.**



“ನೀನು ನಿನ್ನ ಭಗವಂತನ ವಿಷಯದಲ್ಲಿ ದೃಢವಾಗಿ ಉಳಿದರೆ ನಿನ್ನ ಸ್ಥಾನವು ಅತ್ಯಂತ ಉನ್ನತವಾಗಿರುತ್ತದೆ”.